ಕಾಲುವೆಗಳು ಸಂಪೂರ್ಣ ಹಾಳಾಗಿರುವುದು

118 : (332)

ಶ್ರೀ ಅಪ್ಪಾಜಿ ಸಿ.ಎಸ್.ನಾಡಗೌಡ (ಮುದ್ದೇಬಿಹಾಳ)

ಅ) ಆಲಮಟ್ಟಿ ಎಡದಂಡೆ ಕಾಲುವೆಗಳಲ್ಲಿ ರೈತರ ಜಮೀನುಗಳಿಗೆ ನೀರು ಪೂರೈಕೆ ಮಾಡುವ ಕಾರ್ಯ ಯಶಸ್ವಿಯಾಗಿದೆಯೇ;

ಆ) ಉಪ ಕಾಲುವೆಗಳು ಸಂಪೂರ್ಣವಾಗಿ ಹಾಳಾಗಿದ್ದು, ರೈತರ ಜಮೀನುಗಳಿಗೆ ನೀರು ಪೂರೈಕೆಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರವು ಕೈಗೊಳ್ಳುವ ಕ್ರಮಗಳೇನು;

ಈ) ದುರಸ್ತಿ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು; ಅಂದಾಜು ಪಟ್ಟಿ (ಅಂದಾಜು ಮೊತ್ತ) ತಯಾರಿಸಲಾಗಿದೆಯೇ? (ಸಂಪೂರ್ಣ ಮಾಹಿತಿ ನೀಡುವುದು)

ಶ್ರೀ ಬಸವಾರಾಜ ಬೊಮ್ಮಾಯಿ
(ಜಲಸಂಪನ್ಮೂಲ ಸಚಿವರು)

ಅ) ಆಲಮಟ್ಟಿ ಎಡದಂಡೆ ಕಾಲುವೆಗಳಲ್ಲಿ ಕಿ.ಮೀ.72ನ್ನು ಹೊರತುಪಡಿಸಿ ರೈತರ ಜಮೀನುಗಳಿಗೆ ನೀರು ಪೂರೈಕೆ ಮಾಡುವ ಕಾರ್ಯ ಯಶಸ್ವಿಯಾಗಿರುತ್ತದೆ.

ಕಿ.ಮೀ.72 ರಲ್ಲಿ ಬಾಕಿ ಕಾಮಗಾರಿಯ ಗುತ್ತಿಗೆಯನ್ನು ಗುತ್ತಿಗೆದಾರರಿಗೆ ವಹಿಸಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದ್ದು ಆದಷ್ಟು ಶೀಘ್ರದಲ್ಲಿ ಪೂರ್ಣಗೊಳಿಸಲು ಅಗತ್ಯ ಕ್ರಮ ಜರುಗಿಸಿ ಬಾಕಿ ಉಳಿದ 3600 ಹೆ. ಕ್ಷೇತ್ರಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು.

ಆ) ಆಲಮಟ್ಟಿ ಎಡದಂಡೆ ಕಾಲುವೆಯ ಕಿ.ಮೀ. 0.00 ರಿಂದ 67.00ರವರೆಗಿನ ಭಾಗದಲ್ಲಿ ಕೆಲವೊಂದು ಉಪ ಕಾಲುವೆಗಳಲ್ಲಿ ಅಲ್ಲಲ್ಲಿ ಹುಳು ತುಂಬಿ, ಗಿಡಗಂಟಿಗಳು ಬೆಳೆದು, ಲೈನಿಂಗ್ ಹಾಳಾಗಿ ನೀರಿನ ಹರಿಯುವಿಕೆಯಲ್ಲಿ ಸ್ವಲ್ಪಮಟ್ಟಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಸಕಾಲದಲ್ಲಿ ಅಗತ್ಯತೆಯ ಅನುಸಾರ ದುರಸ್ಥಿ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. 2012–13ನೇ ಸಾಲಿನ ಕ್ಲೋಜರ್ ಅವಧಿಯಲ್ಲಿ ರೂ.

80.53 ಲಕ್ಷ ಮೊತ್ತದ 32 ದುರಸ್ಥಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇದಲ್ಲದೇ ಕಾಲುವೆಯ ಕೆಲವೊಂದು ಭಾಗಗಳಲ್ಲಿ ಗಮನಿಸಲಾದ 15 ವಿಶೇಷ ದುರಸ್ಥಿ ಕಾಮಗಾರಿಗಳನ್ನು ಕೂಡಾ ರೂ. 209.00 ಲಕ್ಷ ಮೊತ್ತದಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿರುತ್ತದೆ.

ಕಳಪೆ ಕಾಮಗಾರಿ

126 : (120)

ಡಾ : ಬಗಲಿ ಸಾರ್ವಭವಮ ಸಾತಗೌಡ (ಇಂಡಿ)

ಅ) ಇಂಡಿ ಎಡದಂಡೆ ಕಾಲುವೆ 106 ರಿಂದ 110 – ಕಾಮಗಾರಿಯು ಕಳಪೆ ಮಟ್ಟದ್ದಾಗಿದ್ದು, ಅತ್ಯಂತ ನಿಧಾನಗತಿಯಲ್ಲಿ ಚಲಿಸುತ್ತಿದ್ದು, ಈ ಬಗ್ಗೆ ಸಾರ್ವಜನಿಕ ದೂರುಗಳು ಇದ್ದಾಗ್ಯೂ ಕೂಡ ಗುತ್ತಿಗೆದಾರರಿಗೆ ರೂ.652 ಲಕ್ಷಕ್ಕೂ ಹೆಚ್ಚು ಹಣವನ್ನು ಪಾವತಿಸಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲು ಸರ್ಕಾರ ಕ್ರಮ ಕೈಗೊಳ್ಳದಿರಲು ಕಾರಣಗಳೇನು;

ಇ) ಈ ಕಾಮಗಾರಿಯ ಪ್ರಗತಿ ಮತ್ತು ಗುಣಮಟ್ಟ ಕಾಯ್ದುಕೊಳ್ಳಲು ಅನಾಸಕ್ತಿ ವಹಿಸಿ, ಕಾನೂನು ಬಾಹಿರವಾಗಿ ಹಣ ಪಾವತಿಸಿದ ಎಕ್ಸಿಕ್ಯೂಟಿವ್ ಇಂಜಿನಿಯರ್, ಅಸಿಸ್ಟೆಮಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಮತ್ತು ಜೂನಿಯರ್ ಇಂಜಿನಿಯರ್ ಅವರ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಬಸವಾರಾಜ ಬೊಮ್ಮಾಯಿ
(ಜಲಸಂಪನ್ಮೂಲ ಸಚಿವರು)

ಅ) ಇಂಡಿ ಏತ ನೀರಾವರಿ ಕಾಲುವೆ ಕಿ.ಮೀ. 106 ರಿಂದ 110 ರವರೆಗಿನ ಕಾಮಗಾರಿಯನ್ನು ಅಕ್ಟೋಬರ್ 2009ರಲ್ಲಿ ಗುತ್ತಿಗೆದಾರರಿಗೆ ಟೆಂಡರ್ ಆಧಾರದ ಮೇಲೆ ವಹಿಸಲಾಗಿರುತ್ತದೆ. ಸದರಿ ಕಾಮಗಾರಿಯಲ್ಲಿ ಗುತ್ತಿಗೆದಾರರು ನಿರ್ವಹಿಸಿದ ಪರಿಮಾಣಕ್ಕೆ ಮಾತ್ರ ಬಿಲ್ಲುಗಳನ್ನು ಸಂದಾಯ ಮಾಡಲಾಗಿದೆ.